ಒದ್ದು, 'ಈ ನನ್ಮಗನನ್ನ ಎತ್ಕೊಂಡೋಗಿ ಗೇಟಾಚೆ ಬಿಸಾಕ್ರೋ. ಇನ್ನೊಂದು ನಿಮ್ಮ ಕಣ್ಣೆದ್ರಿದ್ರೂ ಇವ್ನನ್ನ ಕೊಂದು ಬಿಡ್ತೀನಿ' ಎಂಬ ಭುಸುಗುಟ್ಟುವಿಕೆಯಲ್ಲಿ ಅವರ ಒದೆತ ಮುಕ್ತಾಯವಾಯಿತು.

ಜಗದೀಶರ ಸಹಾಯಕರಿಬ್ಬರು ಋತುರಾಜನನ್ನು ಎತ್ತಿ ನಿಲ್ಲಿಸಿದರು. ಕಷ್ಟದಲ್ಲಿ ಮೇಲೆದ್ದ ಋತು ತೋಳನ್ನು ಒತ್ತಿ ಹಿಡಿದುಕೊಂಡು ಅಬ್ಬಾ ಎಂದು ನರಳುತ್ತ ಬಾಗಿಲಿನತ್ತ ನಡೆಯತೊಡಗಿದ. ನಾಲ್ಕು ಹೆಜ್ಜೆ ನಡೆದಿದ್ದನೋ ಇಲ್ಲವೋ, 'ನಿಂತ್ಗಳ' ಎಂಬ ಜಗದೀಶರ ಧ್ವನಿ ಮೊಳಗಿತು. ಕಷ್ಟದಲ್ಲಿ ಅವರತ್ತ ತಿರುಗಿದ.

'ಎಲ್ಲ ಕಡೇನೂ ನಂಗೇ ಲೀಡ್ ಬಂದಿತ್ತು. ಒಂದ್ ಕಡೆ, ಬಣಗಲು ಒಂದ್ ಕಡೆ ನೀನು ನೆಟ್ಟಗೆ ಕೆಲಸ ಮಾಡಿದ್ರೆ ಗೆದ್ದೇ ಬಿಡ್ತಿದ್ನಲ್ಲೋ. ಅನ್ಯಾಯವಾಗಿ ನನ್ನ ಐದು ವರ್ಷಾನ ಹಾಳು ಮಾಡಿದ್ಯಲ್ಲೋ.. ಸರಿಯಾಗಿ ಕೇಳ್ಕೋ.. ನಾಳೆ ಸಂಜೆ ಒಳಗೆ ನಾನು ಕೊಟ್ಟ ಅಷ್ಟೂ ಹಣಾನೂ ವಾಪಾಸ್ ತಂದು ಕೊಡ್ಬೇಕು. ಇಲ್ಲಾಂದ್ರೆ ಚರಂಡಿಗೆ ಹಾಕಿ ತುಳಿದುಬಿಡ್ತೀನಿ. ನನ್ನ ಬಳಸ್ಕೊಂಡು ನೀನು ಮಾಡ್ಕೊಂಡ ಆಸ್ತಿನೆಲ್ಲ ಕಿತ್ಕೊಳ್ದೇ ಬಿಡಲ್ಲ!'

* * *

ದಿವೀನಾದ ಸಂಜೆಯೊಂದು ಬಣಗಲಿನ ಆಕಾಶವನ್ನು ಕೆಂಪಾಗಿಸಿ ಜಾರುತ್ತಿತ್ತು. ಹೊರಗಡೆ ಜಗುಲಿಯಲ್ಲಿ ಕುಳಿತಿದ್ದ ಋತುರಾಜ ಯಾಹ್ ಎಂದು ಆಕಳಿಸಿದ. ಮೂರೇ ಮೂರು ದಿನದಲ್ಲಿ ಏನೇನೆಲ್ಲ ಆಗಿಹೋಯಿತು! ಹೊಸತಾಗಿ ಸಿಕ್ಕ ಒಂದು ನೋಟಿನ ಬ್ಯಾಗು ಎಷ್ಟೆಲ್ಲ ಹಳೆಯ ಆಸ್ತಿಗಳನ್ನೂ ಎಳೆದುಕೊಂಡು ಮುಳುಗಿತು.

'ಅಮ್ಮನ್ನ ಅಪ್ಪ ಹೊಡೆದ್ರೆ ಅಪ್ಪನ್ನ ದೆವ್ವ ಹೊಡ್ಯತ್ತೆ!'

ಕಣ್ಣೆದುರೇ ಮಗನಿಗೆ ಒದ್ದು ಕೆಡವಿದಾಗ ರಾಚಯ್ಯ ಮೇಷ್ಟರು ಹೇಳಿದ್ದ ಮಾತದು. 'ಹೋಗ ಹೋಗ, ದೆವ್ವ ಬಂದ್ರೆ ನಾ ರಣದೆವ್ವ ಆಗ್ತೆ'ಎಂದು ಮೇಷ್ಟರನ್ನೂ ದೂಡಿದ್ದೆ. ಸರಿಯಾಗಿ ಒಂದು ವರ್ಷದ ಹಿಂದೆ. ಈಗ ನೋಡಿದರೆ ಮೂರೇ ದಿನದ ಅವಧಿಯಲ್ಲಿ ತಾನು ಎರಡೆರಡು ಬಾರಿ ಒದೆ ತಿಂದು ನೆಲಕ್ಕೆ ಬಿದ್ದಿದ್ದೇನೆ.

ತಾನು ಬಡಿದ ಮಾರನೇ ದಿನ ಜೀತುವೂ ಹೀಗೇ ಆಕಾಶ ನೋಡುತ್ತಾ ಕುಳಿತಿದ್ದನಾ?

ಏನೇನೋ ಯೋಚನೆಗಳು ತೂರಿ ಬಂದು ಥತ್ ಎಂದು ತಲೆಕೊಡವಿದ ಋತುರಾಜ. ರಾಕ್ಷಸ! ತಲೆಗೇನಾದರೂ ಒದ್ದುಗಿದ್ದು ಬಿಟ್ಟನೋ ಏನೋ? ಹಾಳಾದ್ದು ಏನೇನೋ ಯೋಚನೆ ಬರ್ತಿದೆ...

ಅಷ್ಟರಲ್ಲೇ ತಮಟೆಯ ಸದ್ದು ಹೊಮ್ಮಿಬಂತು. ಹೊರಗೆ ಬಂದು ನೋಡಿದ. ತುಸು ದೂರದ ಮುಖ್ಯರಸ್ತೆಯಲ್ಲಿ ಜನಪರ ಪಕ್ಷದ ಬಣಗಲು ಕಾರ್ಯಕರ್ತರೆಲ್ಲ ಸಂಪಾತಿಯ ಪೋಸ್ಟರ್ ಹಿಡಿದುಕೊಂಡು ಸಂಪಾತಣ್ಣಂಗೇ... ಜೈ ಎಂದು ನಾಲಿಗೆ ಸುಗಿಯುತ್ತ, ಗಲಗಲ ಕುಣಿಯುತ್ತ ಸಾಗುತ್ತಿದ್ದರು. ಎಲ್ಲರ ಮಧ್ಯೆ ಕೊರಳು ಮುಚ್ಚಿಹೋಗುವಂತೆ ಹಾರದ ಮೇಲೆ ಹಾರ ಹಾಕಿಸಿಕೊಂಡ ಸಂಪಾತಿ ಸಾಹೇಬರು ದಶದಿಕ್ಕುಗಳಿಗೂ ಕೈ ಮುಗಿಯುತ್ತ ನಡೆಯುತ್ತಿದ್ದರು.

ಋತುರಾಜ ತಿರುಗಿನೋಡಿದ. ಒಂದಕ್ಕೊಂದು ನೇರವಾಗಿ ನಿಲ್ಲಿಸಿದ ಒಳ ಬಾಗಿಲುಗಳ ಆಚೆ ಮನೆಯ ಹಿಂದುಗಡೆ ಅವನು ಕಟ್ಟಿದ ಎಂಪಿಎಂ ಕಾನಿನ ಬೇಲಿ ಅಸ್ಪಷ್ಟವಾಗಿ ಕಾಣುತ್ತಿತ್ತು. ಇತ್ತ, ಮೊನ್ನೆಯಷ್ಟೇ ನೇಮು ಕಿತ್ತೊಗೆದ ದಣಪೆಯ ದಬ್ಬೆಗಳು ಇನ್ನಾದರೂ ಮನೆಯೆದುರೇ ಬಿದ್ದಿದ್ದವು. ಋತು ತಲೆ ತಗ್ಗಿಸಿದ. ಕಿರೀಟವೊಂದು ಜಾರಿದಂತೆನಿಸಿತು.

ಥಟ್ಟನೆ ತಲೆಯೆತ್ತಿದ. ಮೆರವಣಿಗೆಯ ಮುಂದೆ ನಡೆಯುತ್ತಿದ್ದ ಸಂಪಾತಣ್ಣನ ಬೀಸುವ ಕೈ ಇಂಥಾ ನೂರು ಕಿರೀಟಗಳನ್ನು ಹಿಡಿದು ಬಾ... ಬಾ... ಎಂದಂತೆ ಭಾಸವಾಯಿತು. ಧಡಧಡ ಮನೆಯೊಳಗೆ ಓಡಿ ಕೋಣೆಯಲ್ಲಿಟ್ಟಿದ್ದ ರಂ ಬಾಟಲಿಯನ್ನು ತೆರೆದು ಗಟಗಟ ಗಂಟಲಿಗೆ ಹುಯ್ದುಕೊಂಡವನೇ ಹೊರಕ್ಕೋಡಿ ಬಂದ. ಉನ್ಮತ್ತರಾಗಿ ಕುಣಿಯುತ್ತಿದ್ದ ಗುಂಪಿನೊಳಗೆ ತೂರಿಕೊಂಡು ಅಣ್ಣಂಗೇ ಜೈ... ನಮ್ಮಣ್ಣ ಸಂಪಾತಿಗೇ ಜೈ... ಎಂದು ಕೂಗುತ್ತ ವಕ್ರಾವಕ್ರ ಕುಣಿಯತೊಡಗಿದ. ಒಂದೊಂದು ಕುಣಿತಕ್ಕೂ ನೂರು ಬೇಲಿಗಳು ಹುಟ್ಟಿಕೊಂಡು ಇಡೀ ಬಣಗಲನ್ನೇ ತನ್ನ ಖಾತೆಗೆ ಸೇರಿಸುತ್ತಿರುವಂತೆನಿಸಿ ಅವನ ಉತ್ಸಾಹ ಇಮ್ಮಡಿಯಾಗುತ್ತಲೇ ಹೋಯಿತು.

ದೆವ್ವಗಳ ಹೊಡೆಯುವ ರಣದೆವ್ವವಾಗಿ ಬದಲಾಗುತ್ತಿರುವ ಮಗನನ್ನು ಬಾಗಿಲಿನಲ್ಲಿ ನಿಂತ ಚೀರು ಕಣ್ಕಣ್ಣು ಬಿಟ್ಟು ನೋಡಿದಳು.

●